ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಸಿ3(4)ಪ್ರಾಶಿ.ಉ.ವ್ಯಾ.ಬಿ.ಎ./ಬಿ.ಎಸ್ಸಿ.ಅನುಮತಿ/2017-18 ದಿನಾಂಕ: 08.02.2017

# ಸುತ್ತೋಲೆ

ವಿಷಯ:- ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಿಎ. ಬಿಎಸ್ಸಿ, ವ್ಯಾಸಂಗಕ್ಕೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರದ ಸಂಖ್ಯೆ 135 ಯೋಯೋಕ 2010 ದಿನಾಂಕ 2.7.2010 (ಇಡಿ 79 ಸ್ಕೀಮರ್ (ಯುನಿಕ್) 2010 ದಿನಾಂಕ 2.7.2010. ಮತ್ತು ತಿದ್ದುಪಡಿ ಆದೇಶ ದಿನಾಂಕ 20-07-2011.

******

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ವಿಶೇಷವಾಗಿ ವಿಜ್ಞಾನ, ಗಣಿತ, ಆಂಗ್ಲ ಭಾಷಾ ಶಿಕ್ಷಕರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಪದವಿ-ಬಿಎಸ್ಸಿ (ಪಿಸಿಎಂ, ಸಿಬಿಝಡ್) ಹಾಗೂ ಬಿಎ (ಆಂಗ್ಲ) ವ್ಯಾಸಂಗಕ್ಕೆ ವೇತನಸಹಿತವಾಗಿ ನಿಯೋಜಿಸುವ ಬಗ್ಗೆ ಉಲ್ಲೇಖ- 1 ರ ಸರ್ಕಾರದ ಆದೇಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

**2017-18** ನೇ ಸಾಲಿಗೆ ಪದವಿ-ಬಿಎಸ್ಸಿ (ಪಿಸಿಎಂ, ಸಿಬಿಝಡ್) ಹಾಗೂ ಬಿಎ (ಆಂಗ್ಲ) ವ್ಯಾಸಂಗ ಮಾಡಲು ವೇತನ ಸಹಿತವಾಗಿ ನಿಯೋಜಿಸುವ ಬಗ್ಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1. ಶಿಕ್ಷಕರು ಖಾಯಂ ಪೂರ್ವ ಸೇವಾ ಅವಧಿ ಮುಗಿಸಿ, ಕನಿಷ್ಟ 5 ವರ್ಷ ಸೇವೆ ಸಲ್ಲಿಸಿರಬೇಕು ಹಾಗೂ 45 ವರ್ಷಗಳ ವಯೋಮಿತಿ ಮೀರಿರಬಾರದು.
2. ವಿಜ್ಞಾನ ಶಿಕ್ಷಕರಾಗಿದ್ದಲ್ಲಿ ಬಿಎಸ್ಸಿ (ಪಿಸಿಎಂ ಅಥವಾ ಸಿಬಿಝಡ್) ವ್ಯಾಸಂಗಕ್ಕೆ ಪ್ರಸ್ತಾವನೆ ಸಲ್ಲಿಸಬಹುದು.
3. ಬಿಎ ವ್ಯಾಸಂಗ ಮಾಡುವ ಶಿಕ್ಷಕರು ಆಂಗ್ಲ ವಿಷಯವನ್ನು ಒಳಗೊಂಡ ಸಂಯೋಜನೆಯನ್ನು ಮಾತ್ರ ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ ಐಚ್ಛಿಕ ವಿಷಯಗಳ ಸಂಯೋಜನೆ. ಚರಿತ್ರೆ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಭೂಗೋಳ ಶಾಸ್ತ್ರ, ಸಮಾಜ ಶಾಸ್ತ್ರ ಇನ್ನಿತರೆ ವಿಷಯಗಳೊಂದಿಗೆ ಆಂಗ್ಲ ಭಾಷೆಯನ್ನು ಕಡ್ಡಾಯವಾಗಿ ಐಚ್ಛಿಕ ವಿಷಯವನ್ನಾಗಿ ವ್ಯಾಸಂಗ ಮಾಡತಕ್ಕದ್ದು. ಐಚ್ಛಿಕ ಆಂಗ್ಲ ಭಾಷೆ ಇಲ್ಲದ ಸಂಯೋಜನೆಗಳಿಗೆ ಅವಕಾಶವಿರುವುದಿಲ್ಲ. ಹಾಗೂ ಶಿಕ್ಷಕರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು. ಪಿಯುಸಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿರಬೇಕು ಅಥವಾ ಪ್ರಥಮ ಭಾಷೆ ಆಂಗ್ಲ ಭಾಷೆ ಆಗಿರಬೇಕು. ಅಥವಾ ದ್ವಿತೀಯ ಭಾಷೆಯಲ್ಲಿ ಶೇ. 60 ಅಂಕಗಳಿಸಿರಬೇಕು.
4. ಕರ್ನಾಟಕ ನಾಗರೀಕ ಸೇವಾ- ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ- ಭಾರತದೊಳಗೆ ಉನ್ನತ ವ್ಯಾಸಂಗದ ನಿಯಮಗಳು. ಪರಿಶಿಷ್ಟ- II(A) ನಲ್ಲಿ ನಮೂದಿಸಿರುವ ಎಲ್ಲಾ ಷರತ್ತುಗಳನ್ನು ಉನ್ನತ ವ್ಯಾಸಂಗ ಮುಂದುವರೆಸಲು ಇಚ್ಛಿಸುವ ಶಿಕ್ಷಕರು ಪೂರೈಸಿರಬೇಕು.
5. ಪ್ರತಿ ತಾಲ್ಲೂಕಿನಿಂದ ಗರಿಷ್ಟ 15 ಶಿಕ್ಷಕರ ಜೇಷ್ಠತಾ ಪಟ್ಟಿ ಇರಲೇಬೇಕು.

6. ಹಾಲಿ ಕೆಲಸ ನಿರ್ವಹಿಸುತ್ತಿರುವ ಜಿಲ್ಲೆಯೊಳಗಿನ ಯಾವುದಾದರೂ 5 ಕಾಲೇಜುಗಳಲ್ಲಿ ವ್ಯಾಸಂಗ ಮುಂದುವರಿಸುವ ಇಚ್ಛೆಯನ್ನು ಆದ್ಯತೆ ಅನುಸಾರ ಅರ್ಜಿಯಲ್ಲಿ ನಮೂದಿಸುವುದು.
7. ಶಿಕ್ಷಕರು ಪದವಿ ಪೂರೈಸಿದ ನಂತರ ಕನಿಷ್ಟ 10 ವರ್ಷ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುವುದಾಗಿ ರೂ 10 ಮೌಲ್ಯದ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ನೀಡಬೇಕು.
8. ನಿಯೋಜನೆಯು ಒಟ್ಟು ಸೇವಾವಧಿಯಲ್ಲಿ ಒಂದು ಸಾರಿಗೆ ಮಾತ್ರ ಸೀಮಿತವಾಗಿರತಕ್ಕದ್ದು.
9. ನಿಯೋಜಿತ ಅಭ್ಯರ್ಥಿಯು ವ್ಯಾಸಂಗವನ್ನು ಸಕಾಲದಲ್ಲಿ ಪೂರೈಸದಿದ್ದಲ್ಲಿ ವ್ಯಾಸಂಗದ ಅವಧಿಯ ವೇತನ ಭತ್ಯೆಗಳನ್ನು ಸಂಪೂರ್ಣವಾಗಿ ವಸೂಲು ಮಾಡುವ ಬಗ್ಗೆ ಫಾರಂ ಸಂಖ್ಯೆ -19 ರಲ್ಲಿ ಕರಾರು ಪತ್ರ ಪಡೆಯತಕ್ಕದ್ದು
10. ನಿಯೋಜನೆಯು ವೃಂದಬಲದ ಶೇ 5 ರಷ್ಟನ್ನು ಮೀರಬಾರದು.
11. ತರಬೇತಿಯ ಅವಧಿಯಲ್ಲಿ ಆಕಸ್ಮಿಕ ರಜೆ ಮತ್ತು ಬೇಸಿಗೆ ರಜೆ ಹೊರತುಪಡಿಸಿ ಯಾವುದೇ ತೆರನಾದ ರಜೆಗೆ ಅವಕಾಶವಿರುವುದಿಲ್ಲ.
12. ವ್ಯಾಸಂಗಕ್ಕಾಗಿ ತಗಲುವ ನೈಜ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು ಸರ್ಕಾರದಿಂದ ಭರಿಸಲಾಗುವುದು. ಈ ಕುರಿತಂತೆ ಸಂಪೂರ್ಣ ವಿವರಗಳನ್ನು ಸೇವಾ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಆಸಕ್ತ ಹಾಗೂ ಅರ್ಹ ಶಿಕ್ಷಕರಿಂದ ದಿನಾಂಕ 25.02.2017 ರ ಒಳಗಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿ ಸ್ವೀಕರಿಸಲು ವ್ಯಾಪಕ ಪ್ರಚಾರ ನೀಡಿ ಶಿಕ್ಷಕರಿಂದ ಸ್ವೀಕರಿಸಿದ ಅರ್ಜಿ ಮಾಹಿತಿಯನ್ನು ಗಣಕೀಕರಿಸಿ ಕ್ರೂಢೀಕರಿಸಿದ ನಂತರ ಮುಂಬಡ್ತಿ ನೀಡುವಾಗ ಅನುಸರಿಸುವ ನಿಯಮಗಳನ್ವಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಾಲ್ಲೂಕುವಾರು ತಾತ್ಕಾಲಿಕ ಜೇಷ್ಟತಾಪಟ್ಟಿ ಸಿದ್ಧಪಡಿಸಿ, ಸೂಚನಾ ಫಲಕದಲ್ಲಿ ಪ್ರಕಟಿಸಿ ಆಕ್ಷೇಪಣೆ ಸಲ್ಲಿಸಲು 5 ದಿನಗಳ ಕಾಲಾವಕಾಶ ನೀಡುವುದು. ಶಿಕ್ಷಕರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿಗಳೊಂದಿಗೆ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಅಗತ್ಯ ದಾಖಲೆಗಳೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕರಿಸಿದ ತಾಲ್ಲೂಕುವಾರು ಜೇಷ್ಟತಾ ಪಟ್ಟಿಯ ಆಧಾರ ಹಾಗೂ ಶಿಕ್ಷಕರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಜಿಲ್ಲಾ ಹಂತದಲ್ಲಿ ಜೇಷ್ಟತಾ ಪಟ್ಟಿಯನ್ನು ಉಪನಿರ್ದೇಶಕರು ಮುಂಬಡ್ತಿ ನೀಡುವಾಗ ಅನುಸರಿಸುವ ನಿಯಮಗಳನ್ವಯ ಸಿದ್ಧಪಡಿಸುವುದು. ಪ್ರತಿ ವರ್ಷ ಜನವರಿ ಒಂದನೇ ತಾರೀಖಿನಲ್ಲಿದ್ದಂತೆ ಜೇಷ್ಠತಾಪಟ್ಟಿ ಪರಿಷ್ಕರಿಸುವುದು.

ಜಿಲ್ಲಾ ಜೇಷ್ಟತಾ ಪಟ್ಟಿಯಲ್ಲಿನ ಜೇಷ್ಟತೆಯನ್ವಯ, ಪ್ರತಿ ತಾಲ್ಲೂಕಿಗೆ ಮೂರು ವಿಜ್ಞಾನ ಇಬ್ಬರು ಆಂಗ್ಲ ಭಾಷಾ ಶಿಕ್ಷಕರ ಪ್ರಸ್ತಾವನೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ನಿಗಧಿತ ಚೆಕ್‌ಲಿಸ್ಟ್‌ನಲ್ಲಿ ರಾಜ್ಯದ ಎಲ್ಲಾ ಉಪನಿರ್ದೇಶಕರು ಸ್ವೀಕರಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಕ್ರೂಢೀಕರಣಕ್ಕಾಗಿ ನಿಗಧಿಪಡಿಸಿದ ನಮೂನೆಯಲ್ಲಿ ಎಲ್ಲಾ ಮಾಹಿತಿಯನ್ನು ಶಿಕ್ಷಕರವಾರು ಭರ್ತಿ ಮಾಡಿ ಸಲ್ಲಿಸುವುದು.

ಅರ್ಜಿ ಭರ್ತಿ ಮಾಡುವಾಗ ಶಿಕ್ಷಕರು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯೊಳಗೆ ಅವರು ವ್ಯಾಸಂಗ ಮುಂದುವರೆಸಲು ಇಚ್ಛಿಸುವ 5 ಸರ್ಕಾರಿ/ ಅನುದಾನಿತ/ಅನುದಾನ ರಹಿತ ಕಾಲೇಜುಗಳ ಪೂರ್ಣ ಹೆಸರು ಹಾಗೂ ವಿಳಾಸವನ್ನು ಆದ್ಯತೆಯನ್ವಯ ನಮೂದಿಸುವುದು. ಇಲಾಖೆಯ ಸಹಕಾರ ಇಲ್ಲದೆ UGC ಮಾನ್ಯತೆ ಪಡೆದ ಪದವಿ ಕಾಲೇಜುಗಳಲ್ಲಿ ಪ್ರವೇಶ ಅವಕಾಶವನ್ನು ಪಡೆದುಕೊಳ್ಳಬೇಕು.

2017-18 ನೇ ಶೈಕ್ಷಣಿಕ ಸಾಲಿನ ಪ್ರವೇಶ ಪ್ರಾರಂಭವಾಗುವ ಮೊದಲು ಬಿಎ ಬಿಎಸ್ಸಿ ವ್ಯಾಸಂಗ ಮುಂದುವರೆಸುವ ಶಿಕ್ಷಕರ ಪ್ರಸ್ತಾವನೆಯನ್ನು ಶಾಲಾ ಕಾರ್ಯಕ್ಕೆ ಅಡಚಣೆ ಆಗದಂತೆ ಬದಲಿ ಶಿಕ್ಷಕರನ್ನು ನಿಯೋಜಿಸುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಚೆಕ್‌ಲಿಸ್ಟನಲ್ಲಿ ಸ್ಪಷ್ಟ ಅಭಿಪ್ರಾಯದ ಶಿಫಾರಸ್ಸು ಮಾಡತಕ್ಕದ್ದು.

ಇದು ಕಾಲಮಿತಿ ಪ್ರಕರಣವಾಗಿದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ) ಹಾಗು ಎಲ್ಲಾ ಕ್ಷೇತ್ರ ಸಿಬ್ಬಂದಿ ವೈಯುಕ್ತಿಕ ಗಮನಹರಿಸಿ ಸ್ಥಳೀಯ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡಿ ಸೂಚನಾ ಫಲಕಗಳಲ್ಲಿ ಪ್ರಕಟಿಸಿ, ಸಭೆಗಳಲ್ಲಿ ಕಡ್ಡಾಯವಾಗಿ ವಿಷಯ ತಿಳಿಸಿ ಹೆಚ್ಚು ಸಂಖ್ಯೆಯ ಶಿಕ್ಷಕರನ್ನೊಳಗೊಂಡ ಜೇಷ್ಟತಾ ಪಟ್ಟಿಯನ್ನು ತುರ್ತಾಗಿ ಸಿದ್ದಪಡಿಸಲು ತಿಳಿಸಿದೆ. ಉಪನಿರ್ದೇಶಕರು (ಆಡಳಿತ) ಇವರು ಅಂತಿಮ ಜೇಷ್ಟತಾ ಪಟ್ಟಿಯ ಪ್ರತಿಯನ್ನು ಈ ಕಾರ್ಯಾಲಯಕ್ಕೆ ಕಳುಹಿಸಿಕೊಡಲು ತಿಳಿಸಿದೆ.

ಸಂಬಂಧಿಸಿದ ಉಪನಿರ್ದೇಶಕರು ಪದವಿ (ಪಿಸಿಎಂ, ಸಿಬಿಝಡ್, ಬಿಎಆಂಗ್ಲ) ವ್ಯಾಸಂಗದ ಪ್ರಸ್ತಾವನೆಗಳನ್ನು **ದಿನಾಂಕ 30-03-2017** ರ ಒಳಗೆ ಈ ಕಾರ್ಯಾಲಯಕ್ಕೆ ಸಲ್ಲಿಸುವುದು. ಅರ್ಜಿನಮೂನೆ, ಚೆಕ್‌ಲಿಸ್ಟ, ಜೇಷ್ಠತಾಪಟ್ಟಿ ನಮೂನೆ, ಕ್ರೋಢೀಕರಣಕ್ಕಾಗಿ ಸಿದ್ದಪಡಿಸಿರುವ ನಮೂನೆ, ಫಾರಂ ನಂ-19 ರ ಪ್ರತಿಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ. ಜೇಷ್ಠತಾ ಪಟ್ಟಿಯನ್ನು ಉಪನಿರ್ದೇಶಕರು ದೃಢೀಕರಿಸಿರಬೇಕು. ಅದರಂತೆ ವ್ಯಾಸಂಗ ಮಾಡಲು ಇಚ್ಚಿಸಿರುವ ಪ್ರತಿ ಶಿಕ್ಷಕರ ಮಾಹಿತಿ ಹಾಗೂ ದಾಖಲೆಗಳನ್ನು ಈ ಕಾರ್ಯಾಲಯಕ್ಕೆ ದಿನಾಂಕ **30-03-2017** ರ ಒಳಗೆ ಸಲ್ಲಿಸಲು ತಿಳಿಸಿದೆ. ನಂತರ ಬಂದ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ. ಈ ಸುತ್ತೋಲೆಯನ್ನು ಅಂತರಜಾಲದಲ್ಲಿ ಕೂಡ ಪ್ರಕಟಿಸಲಾಗಿದೆ. www.schooleducation.kar.nic.in) ಜೇಷ್ಠತಾ ಪಟ್ಟಿ ಹಾಗೂ ಕ್ರೋಢೀಕರಣ ನಮೂನೆಯ ಸಾಫ್ಟ್ ಕಾಪಿ (soft copy) ಕೂಡ ಸಲ್ಲಿಸಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,
ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬೆಂಗಳೂರು.
2. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ ಇವರಿಗೆ ಮಾಹಿತಿಗಾಗಿ
3. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ನಂ.4, 100 ಫೀಟ್ ರಿಂಗ್ ರೋಡ್, ಬನಶಂಕರಿ 3 ನೇ ಹಂತ ಬೆಂಗಳೂರು-85.
4. ಕ/ಪ್ರ

ಚೆಕ್‌ಲಿಸ್ಟ್

ಸರ್ಕಾರದ ಪತ್ರ ದಿನಾಂಕ 02-07-2010 ರಂತೆ 2017-18 ನೇ ಸಾಲಿಗೆ **ಬಿಎಸ್ಸಿ ( ಪಿಸಿಎಂ, ಸಿಬಿಝಡ್)** **ಬಿಎ (ಆಂಗ್ಲ)** ಪದವಿ ವ್ಯಾಸಂಗಕ್ಕೆ ಅನುಮತಿ ಕೋರಿ ಸಲ್ಲಿಸುವ ಪ್ರಸ್ತಾವನೆಯೊಂದಿಗೆ ಲಗತ್ತಿಸಬೇಕಾದ ವಿವರ

| ಕ್ರ ಸಂ. | ವಿವರ | ವಿವರಗಳನ್ನು ಪೂರೈಸುವುದು. |
|---|---|---|
| 01 | ಶಿಕ್ಷಕರ ಹೆಸರು ಮತ್ತು ವಿಳಾಸ | |
| 02 | ಹುಟ್ಟಿದ ದಿನಾಂಕ:<br>ಸೇವೆಗೆ ಸೇರಿದ ದಿನಾಂಕ: | |
| 03 | ಖಾಯಂಪೂರ್ವ ಸೇವಾ ಅವಧಿ ಘೋಷಣೆ ಮಾಡಿದ ಆದೇಶದ ಸಂಖ್ಯೆ ಮತ್ತು ದಿನಾಂಕ<br>**(ಪ್ರತಿಯೊಂದಿಗೆ)** | |
| 04 | ಮೂಲವೇತನ / ವೇತನ ಶ್ರೇಣಿ | |
| 05 | ಶಿಕ್ಷಕರು ಖಾಯಂ ಪೂರ್ವ ಸೇವಾವಧಿ ಮುಗಿಸಿ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಲಾಗಿದೆಯೇ?<br>ಶಿಕ್ಷಕರು 45 ವರ್ಷಗಳ ವಯೋಮಿತಿಯ ಒಳಗೆ ಇದ್ದಾರೆಯೇ ?<br>**ಮೇಲ್ಕಂಡ ವಿಷಯಗಳಿಗೆ ದೃಡೀಕರಣ ಲಗತ್ತಿಸುವುದು.** | |
| 06 | ವಿದ್ಯಾರ್ಹತೆ ಮತ್ತು ವಿಷಯಗಳು (Subjects-PUC) :<br>ಆಂಗ್ಲ **ವಿಷಯಗಳನ್ನು** ಒಳಗೊಂಡ ಬಿಎ ಪದವಿಗಾಗಿ ಪಿಯುಸಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿರಬೇಕು ಅಥವಾ ಪ್ರಥ್ಮ ಭಾಷೆ ಆಂಗ್ಲ ಭಾಷೆಯಾಗಿರಬೇಕು ಅಥವಾ ದ್ವಿತೀಯ ಭಾಷೆಯಲ್ಲಿ ಶೇ.60 ಅಂಕ ಗಳಿಸಿರಬೇಕು. **ಪಿಯುಸಿ ಅಂಕಪಟ್ಟಿ ಲಗತ್ತಿಸಲಾಗಿದೆಯೇ?** | |
| 07 | ಪಡೆಯಬೇಕಾದ ಪದವಿಯ ವಿವರ ಬಿಎಸ್ಸಿ **(ಪಿಸಿಎಂ/ಸಿಬಿಝಡ್) ಹಾಗೂ ಬಿಎ(ಆಂಗ್ಲ)** | |
| 08 | ಶಿಕ್ಷಕರಿಂದ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ಲಗತ್ತಿಸಲಾಗಿದೆಯೇ ?<br>(ಪದವಿ ಪೂರೈಸಿದ ನಂತರ ಕನಿಷ್ಟ 10 ವರ್ಷ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವ ಬಗ್ಗೆ | |
| 09 | ಫಾರಂ ನಂ- 19 ಲಗತ್ತಿಸಲಾಗಿದೆಯೇ ?<br>ವ್ಯಾಸಂಗ ಪೂರೈಸದಿದ್ದಲ್ಲಿ ವ್ಯಾಸಂಗದ ಅವಧಿಯ ವೇತನ ಭತ್ಯೆಗಳನ್ನು ಸಂಪೂರ್ಣವಾಗಿ ವಸೂಲು ಮಾಡುವ ಬಗ್ಗೆ | |
| 10 | ಈ ಹಿಂದೆ ಇಲಾಖೆಗೆ ಸೇರಿದ ನಂತರ ವ್ಯಾಸಂಗ ಮುಂದುವರೆಸಿದ್ದರೆ ಇಲಾಖಾ ಅನುಮತಿ ಪಡೆದಿರುವ ವಿವರ. | |
| 11 | ಶಿಕ್ಷಕರನ್ನು ನಿಯೋಜಿಸಿದಲ್ಲಿ ಮಕ್ಕಳ ಕಲಿಕೆಗೆ ನಷ್ಟವಾಗದಂತೆ ಮಾಡಬಹುದಾದ ಬದಲಿ ವ್ಯವಸ್ಥೆ | |
| 12 | ಕ್ಷೇತ್ರ ಶಿಕ್ಷಣಾಧಿಕಾರಿಗಳ/ ಉಪನಿರ್ದೇಶಕರ ಅಭಿಪ್ರಾಯ | |

ಕ್ಷೇತ್ರ ಶಿಕ್ಷಣಾಧಿಕಾರಿ

ಉಪನಿರ್ದೇಶಕರು(ಆಡಳಿತ)

ಕ್ರೋಡೀಕರಣಕ್ಕಾಗಿ ಸಿದ್ದಪಡಿಸಿರುವ ನಮೂನೆ 2017–18

ಜಿಲ್ಲೆ:

| ಕ್ರ.ಸಂ | ಶಿಕ್ಷಕರ ಹೆಸರು ಮತ್ತು ವಿಳಾಸ<br>ದೂರವಾಣಿ ಸಂಖ್ಯೆ | ಜನ್ಮ ದಿನಾಂಕ/ ಕೆಲಸಕ್ಕೆ ಸೇರಿದ ದಿನಾಂಕ / ಖಾಯಂ ಪೂರ್ವ ಸೇವಾವಧಿ ಪೂರೈಸಿದ ದಿನಾಂಕ | ಮುಂದುವರಿಸಲಿರುವ ವ್ಯಾಸಂಗದ ವಿಷಯ.<br>ಪಿಸಿಎಂ/ ಸಿಬಿಝಡ್/ ಬಿಎಆಂಗ್ಲ. | ವ್ಯಾಸಂಗ ಮಾಡಲು ಇಚ್ಛಿಸಿರುವ ಕಾಲೇಜುನ ವಿಳಾಸ<br>ವಿಶ್ವವಿದ್ಯಾಲಯ: (University) | ಮಕ್ಕಳ ಸಂಖ್ಯೆ/ ಶಿಕ್ಷಕರ ಸಂಖ್ಯೆ/ ಖಾಲಿ ಹುದ್ದೆ/ | ಶಿಕ್ಷಕರಿಂದ ಛಾಪಾಕಾಗದದಲ್ಲಿ ಮುಚ್ಚಳಿಕೆ ಪತ್ರ/ ಫಾರಂ. ಸಂಖ್ಯೆ 19 ಲಗತ್ತಿಸಲಾಗಿದೆಯೇ | ಷರಾ |
|---|---|---|---|---|---|---|---|
| 01 | 02 | 03 | 04 | 05 | 06 | 07 | 08 |

ಸಹಿ

ಉಪನಿರ್ದೇಶಕರು

# ಸೇವಾ ನಿರತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಿಎಸ್ಸಿ (ಪಿಸಿಎಂ, ಸಿಬಿಝಡ್) ಬಿಎ (ಆಂಗ್ಲ) ವ್ಯಾಸಂಗಕ್ಕೆ ಜೇಷ್ಠತಾ ಪಟ್ಟಿ

ಜಿಲ್ಲೆ:

| ಕ್ರ.ಸಂ | ತಾಲ್ಲೂಕು | ಶಿಕ್ಷಕರ ಹೆಸರು, ಪದನಾಮ ಮತ್ತು ಶಾಲೆಯ ವಿಳಾಸ | ಜನ್ಮದಿನಾಂಕ | ವಿದ್ಯಾರ್ಹತೆ | ಪಿಯುಸಿಯ ವ್ಯಾಸಂಗ ಮಾಧ್ಯಮ | ಪಿಯುಸಿ ಆಂಗ್ಲ ಭಾಷೆಯಲ್ಲಿ ಪಡೆದಿರುವ ಅಂಕ | ಮುಂದುವರಿಸ ಲಿಚ್ಚಿಸಿರುವ ವ್ಯಾಸಂಗದ ವಿಷಯ/ (ಪಿಸಿಎಂ, ಸಿಬಿಝಡ್, ಬಿಎ ಆಂಗ್ಲ.) ವಿಶ್ವವಿದ್ಯಾಲಯ: (ಗಟಿಷಾಬ್ಖಿಾಧಿ) | ಸೇವೆಗೆ ಸೇರಿದ ದಿನಾಂಕ | ಮುಂಬಡ್ತಿಗಾಗಿ ಜಿಲ್ಲಾ ಜೇಷ್ಠತಾಪಟ್ಟಿ ಕ್ರಮ ಸಂಖ್ಯೆ | ನೇಮಕಾತಿ ವಿಧಾನ | ಷರಾ |
|---|---|---|---|---|---|---|---|---|---|---|---|
| 01 | 02 | 03 | 04 | 05 | 06 | 07 | 08 | 09 | 10 | 11 | 12 |

ಮೇಲ್ಕಂಡ ಜೇಷ್ಠತಾ ಪಟ್ಟಿ ಜೇಷ್ಟತೆಯ ಪ್ರಕಾರ ಸರಿ ಇರುತ್ತದೆ ಎಂದು ದೃಡೀಕರಿಸಲಾಗಿದೆ.

ಸಹಿ (ಉಪನಿರ್ದೇಶಕರು)

ಸರ್ಕಾರಿ ನೌಕರನು ಉಪಯೋಗಿಸಿಕೊಂಡ ರಜೆ ಪ್ರಯಾಣ ರಿಯಾಯತಿಯ ವಿವರ ಮತ್ತು ಇತರ ವಿಶೇಷ ಮಾಹಿತಿಗಳು

## ನಮೂನೆ – 19

ಉನ್ನತ ವ್ಯಾಸಂಗಕ್ಕಾಗಿ / ವಿಶೇಷ ತರಬೇತಿಗಾಗಿ ಪ್ರತಿ ನಿಯೋಜನೆಯ ಮೇಲೆ ಹೋಗುವ ಸರ್ಕಾರಿ ನೌಕರನು ಬರೆದುಕೊಡಬೇಕಾದ ಬಂಧಪತ್ರ.

ಈ ಬಂಧಪತ್ರದ ಮೂಲಕ ಸಮಸ್ತರಿಗೂ ತಿಳಿಸುವುದೇನೆಂದರೆ:

ಕಾರ್ಯನಿರ್ವಹಿಸುತ್ತಿರುವ........................................................ ಇಲಾಖೆ / ಕಛೇರಿಯಲ್ಲಿ/ಶಾಲೆಯಲ್ಲಿ ಸಧ್ಯಕ್ಕೆ .................................. ಆಗಿ ನಿಯೋಜಿತನಾಗಿರುವ ........................................... ಜಿಲ್ಲೆಯ ............................ನ ನಿವಾಸಿಯಾದ [ಇನ್ನು ಮುಂದೆ 'ಕರಾರುದಾರ' ಎಂದು ಕರೆಯಲಾಗುವ] .................................. ಎಂಬ ನಾವು ಮತ್ತು [ಇಲ್ಲಿ ಇನ್ನು 'ಜಾಮೀನುದಾರ'ರೆಂದು ಕರೆಯಲಾಗುವ] .......................................ಅವರ ಮಗ / ಮಗಳಾ ..................................... ಅವರು ಮತ್ತು ................................ ಅವರ ಮಗಳಾದ ......................... ಅವರು ಸರ್ಕಾರಿ ಸಾಲಗಳ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಸರ್ಕಾರಿ ದರಗಳಲ್ಲಿ ಬೇಡಿಕೆಯ ದಿನಾಂಕದಿಂದ ಅದರ ಮೇಲಿನ ಬಡ್ಡಿಯ ಸಹಿತ .............................. ರೂಗಳ ...................... [ರೂಗಳು ಮಾತ್ರ] ಮೊತ್ತವನ್ನು ಕೋರಿದಾಗ [ಇನ್ನು ಮುಂದೆ 'ಸರ್ಕಾರವೆಂದು ಕರೆಯಲಾಗುವ] ಕರ್ನಾಟಕದ ರಾಜ್ಯಪಾಲರಿಗೆ ಸಂದಾಯ ಮಾಡಲು ನಾವು ಮತ್ತು ನಮಗೆ ಸಂಬಂಧಿಸಿದ ನಮ್ಮ ವಾರಸುದಾರರು, ಕಾರ್ಯನಿರ್ವಾಹಕರು, ಆಡಳಿತಗಾರರು ಒಟ್ಟಾಗಿ ಮತ್ತು ಪ್ರತ್ಯೇಕ ಪ್ರತ್ಯೇಕವಾಗಿ ಈ ಮೂಲಕ ಬದ್ಧರಾಗಿದ್ದೇವೆ. ಅಲ್ಲದೆ, ವಕೀಲರು ಮತ್ತು ಕಕ್ಷಿಗಾರರು ಎಲ್ಲ ವೆಚ್ಚಗಳನ್ನು ಸಂದಾಯ ಮಾಡಲಾಗುವುದು.

ಸರ್ಕಾರದ ಮೂಲಕ ಕರಾರುದಾರನು ಉನ್ನತ ವ್ಯಾಸಂಗ/ವಿಶೇಷ ತರಬೇತಿಗಾಗಿ ಪ್ರತಿ ನಿಯೋಜಿತವಾಗಿರುವುದರಿಂದ;

ಮತ್ತು ಸರ್ಕಾರದ ಉತ್ತಮ ಸಂರಕ್ಷಣೆಗಾಗಿ ಈ ಷರತ್ತುಗಳೊಂದಿಗೆ ಈ ಬಂಧಪತ್ರವನ್ನು ಬರೆದುಕೊಡಲು ಕರಾರುದಾರನು ಒಪ್ಪಿರುವುದರಿಂದ;

ಮತ್ತು ಮೇಲೆ ಹೇಳಿದ ಜಾಮೀನುದಾರರು ಮೇಲೆ ತಿಳಿಸಿದ ಕರಾರುದಾರ .............................. ಅವರ ಪರವಾಗಿ ಈ ಬಂಧಪತ್ರವನ್ನು ಬರೆದುಕೊಡಲು ಒಪ್ಪಿರುವುದರಿಂದ;

ಮೇಲೆ ತಿಳಿಸಿದ ಲಿಖಿತ ಕರಾರಿನ ಷರತ್ತುಗಳೇನೆಂದರೆ ಪ್ರತಿ ಯೋಜನೆಯ ಗಡುವು ಪೂರೈಸಿದ ನಂತರ ಅಥವಾ ಅವಧಿ ಮುಗಿದ ನಂತರ ಅಥವಾ ಕರ್ತವ್ಯಕ್ಕೆ ಅವರು ಹಿಂತಿರುಗಿದ ಮೂರು ವರ್ಷಗಳ ಅವಧಿಯೊಳಗೆ ಯಾವುದೇ ಸಮಯದಲ್ಲಿ ಕರ್ತವ್ಯಕ್ಕೆ ಹಿಂತಿರುಗದೆ ಸೇವೆಯನ್ನು ಪುನ: ವಹಿಸಿಕೊಳ್ಳಲು ತಪ್ಪಿದ ಅಥವಾ ಸೇವೆಗೆ ರಾಜೀನಾಮೆ ನೀಡಿದ ಅಥವಾ ಅನ್ಯಥಾ ಸೇವೆಯನ್ನು ಬಿಟ್ಟುಬಿಟ್ಟ ಸಂದರ್ಭದಲ್ಲಿ, ಕರಾರುದಾರನು ಮತ್ತು ಅವರ ಜಾಮೀನುದಾರರು ........................... ಸರ್ಕಾರದ ಸಾಲದ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಸರ್ಕಾರಿ ಬೇಡಿಕೆ ದಿನಾಂಕದಿಂದ ಅದೆ ಮೇಲಿನ ಬಡ್ಡಿಯೊಂದಿಗೆ ರೂಗಳ [........... ರೂಗಳು ಮಾತ್ರ] ಸದರಿ ಮೊತ್ತವನ್ನು ಕೋರಿದಾಗ, ಸರ್ಕಾರಕ್ಕೆ ಅಥವಾ ಸರ್ಕಾರದಿಂದ ನಿರ್ದೇಶಿಸಬಹುದಾದ ವ್ಯಕ್ತಿಗಳಿಗೆ ಕೂಡಲೇ ಸಂದಾಯ ಮಾಡತಕ್ಕದ್ದು.

ಪ್ರತಿ ನಿಯೋಜಿತನು ಅಧ್ಯಯನದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲವೆಂದು ಅಥವಾ ಸೂಕ್ತ ಸಮಯದಲ್ಲಿ ವ್ಯಾಸಂಗವನ್ನು ಪೂರೈಸಲು ತಪ್ಪಿದ್ದಾನೆಂದು ಸಕ್ಷಮ ಅಧಿಕಾರಿಗಳು ತೀರ್ಮಾನಿಸಿದ ಸಂದರ್ಭದಲ್ಲಿ ಕರಾರುದಾರನ ವೇತನದಿಂದ ಕರಾರುದಾರನ ಉನ್ನತ ವ್ಯಾಸಂಗ/ವಿಶೇಷ ತರಬೇತಿಗಾಗಿ ಮಾಡಿದ ವೆಚ್ಚವನ್ನು [ವೇತನ ಮತ್ತು ಭತ್ಯಗಳು, ಶಿಷ್ಯವೇತನ, ತುಟ್ಟಿಭತ್ಯ, ಶಿಕ್ಷಣ ಶುಲ್ಕ ಇತ್ಯಾದಿಗಳು ಒಳಗೊಂಡಂತೆ] ಸರ್ಕಾರವು ವಸೂಲಿ ಮಾಡುವುದು ವಿಧಿಸಮ್ಮತವಾಗಿರತಕ್ಕದ್ದು. ವೇತನದಿಂದ ಅದನ್ನು ವಸೂಲಿ ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ ಸರ್ಕಾರದಿಂದ ವಹಿಸಲಾದ ವೆಚ್ಚದ ಸಂಪೂರ್ಣ ಮೊಬಲಗನ್ನು ಕರಾರುದಾರ ಮತ್ತು ಜಾಮೀನುದಾರರು ಒಟ್ಟಾಗಿ ಮತ್ತು ಪ್ರತ್ಯಕ್ಷವಾಗಿ ಮರು ಸಂದಾಯ ಮಾಡಲು ಬದ್ಧವಾಗಿರತಕ್ಕದ್ದು.

ಮತ್ತು ಮೇಲೆ ಹೇಳಿದ ಕರಾರುದಾರರಾದ ..................... ಮತ್ತು ಜಾಮೀನುದಾರರಾದ ..................................... ಮತ್ತು / ಅಥವಾ ................................. ಅವರು ಸಂದಾಯವನ್ನು ಮಾಡಿದ ತರುವಾಯ ಮೇಲಿನ ಲಿಖಿತ ಕರಾರು ಶೂನ್ಯವಾಗತಕ್ಕದ್ದು ಮತ್ತು ಜಾರಿಗೆ ಬರತಕ್ಕುದಲ್ಲ. ಅನ್ಯಥಾ ಅದು ಸಂಪೂರ್ಣ ಜಾರಿಯಲ್ಲಿರತಕ್ಕದ್ದು.

ಪರಂತು, ಯಾವಾಗಲೂ ಸರ್ಕಾರ ಅಥವಾ ಅದರಿಂದ ಅಧಿಕೃತನಾದ ಯಾವುದೇ ವ್ಯಕ್ತಿಯ [ಜಾಮೀನುದಾರರ ಸಮ್ಮತಿ ಅಥವಾ ತಿಳಿವಳಿಕೆಯೊಂದಿಗೆ] ಅಥವಾ ಈ ಮೇರೆಗಿನ ಕಾಲನೀಡಿಕೆ ಅಥವಾ ಯಾವುದೇ ತ್ಯಜಿಸುವಿಕೆ, ಕೃತ್ಯ ಅಥವಾ ಲೋಪದ ಕಾರಣದಿಂದ ಜಾಮೀನುದಾರರ ದಾಯಿತ್ವವನ್ನು ಬಾಧಿತಗೊಳಿಸತಕ್ಕದ್ದಲ್ಲ ಅಥವಾ ವಿಮುಕ್ತಿಗೊಳಿಸತಕ್ಕದ್ದಲ್ಲ. ಇಲ್ಲವೇ, ಸರ್ಕಾರವು ಈ ಮೇರೆಗೆ ಬಾಕಿಯಿರುವ ಮೊಬಲಗಿಗಾಗಿ ಜಾಮೀನುದಾರರಾದ ......................... ಮತ್ತು ............................ ಅಥವಾ ಅವೆಲ್ಲ ಯಾರ ಮೇಲೆ ಆಗಲಿ ದಾವಾ ಹೂಡುವ ಮೊದಲು ಕರಾರುದಾರನ ಮೇಲೆ ದಾವೆ ಹೂಡುವುದು ಅವಶ್ಯಕವಾಗತಕ್ಕದ್ದು.

ಈ ಬಂಧಪತ್ರವು ಎಲ್ಲ ರೀತಿಯಿಂದಲೂ ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತದ ಕಾನೂನುಗಳಿಂದ ಪರಿಪಾಲಿತವಾಗಿರತಕ್ಕದ್ದು ಮತ್ತು ಇದರ ಮೇರೆಗಿನ ಹಕ್ಕುಗಳನ್ನು ಮತ್ತು ಇತರ ದಾಯಿತ್ವಗಳನ್ನು ಅವಶ್ಯವಿರುವಲ್ಲಿ ಭಾರತದಲ್ಲಿಯ ಸಮುಚಿತ ನ್ಯಾಯಾಲಯವು ಸಾರ ನಿರ್ಧರಿಸತಕ್ಕದ್ದು.

ಕರ್ನಾಟಕ ಸರ್ಕಾರವು ಈ ಬಂಧಪತ್ರದ ಮೇಲಿನ ಮುದ್ರಾಂಕ ಶುಲ್ಕವನ್ನು ವಹಿಸಲು ಸಮ್ಮತಿಸಿದೆ. ಎರಡು ಸಾವಿರದ....................................ನೆಯ ವರ್ಷದ .......................... ತಿಂಗಳ..................... ದಿನವಾದ ಇಂದು ಸಹಿ ಮಾಡಲಾಗಿದೆ. ............................ ಅವರ ಸಮಕ್ಷಮದಲ್ಲಿ ಮೇಲೆ ತಿಳಿಸಿದೆ. ಕರಾರುದಾರ .................... ಅವರು ಸಹಿ ಮಾಡಿದ್ದಾರೆ.

ಸಾಕ್ಷಿಗಳು:

[1]

[2]

.............................. ಅವರ ಸಮಕ್ಷಮದಲ್ಲಿ ಮೇಲೆ ತಿಳಿಸಿದ ಹೆಸರಿನ ಜಾಮೀನುದಾರರಾದ .................................... ಅವರು ಸಹಿ ಮಾಡಿ ಒಪ್ಪಿಸಿರುತ್ತಾರೆ.

............................ ಅವರ ಸಮಕ್ಷಮದಲ್ಲಿ ಮೇಲೆ ತಿಳಿಸಿದ ಜಾಮೀನುದಾರರಾದ ......................... ಅವರು ಸಹಿ ಮಾಡಿ ಒಪ್ಪಿಸಿರುತ್ತಾರೆ.

ಸಾಕ್ಷಿಗಳು:

[1]

[2]

ಸ್ವೀಕರಿಸಲಾಗಿದೆ
ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಪರವಾಗಿ